Ex:- 32/2025 ಪಿ.ಡಬ್ಲ್ಯೂ- 1

ದಿನಾಂಕಃ 20.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಜೆಡಿಆರ್ ಪರ ಶ್ರೀ.ಎಸ್ ಎನ್ ಪಿ ವಕೀಲರು

ನೀಲಕಂಠಪ್ಪರವರು ನನ್ನ ತಂದೆ ಎಂದರೆ ಸರಿ. ಜೆಡಿಆರ್ ನಂ.1 ರವರು ನನ್ನ ತಂದೆಯವರಿಗೆ ಏನಾಗಬೇಕು ಎಂದರೆ ಅಣ್ಣ. ಜೆಡಿಆರ್ ನಂ.2 ರವರು ನನಗೆ ಏನಾಗಬೇಕು ಎಂದರೆ ದೊಡ್ಡಪ್ಪನ ಮಗ. ನಮ್ಮ ಆಸ್ತಿಯ ಪಕ್ಕದಲ್ಲಿ ಜೆಡಿಆರ್ ರವರ ಆಸ್ತಿಯೂ ಇದೆ ಎಂದರೆ ಸರಿ. ನಮ್ಮ ಜಮೀನಿನ ಸರ್ವೆ ನಂ.6/6 ಹಾಗೂ ಜೆಡಿಆರ್ ರವರ ಜಮೀನ ಸರ್ವೆ ನಂ.6/7 ಎಂದರೆ ಸರಿ. ನಮ್ಮ ಜಮೀನಿನ ಪೂರ್ವಕ್ಕೆ ಜೆಡಿಆರ್ ರವರ ಜಮೀನು ಬರುತ್ತದೆ ಎಂದರೆ ಸರಿ. ಓಎಸ್ ನಂ.86/2012 ರ ದಾವೆಯ ತೀರ್ಪಿನ ಬಗ್ಗೆ ವಕೀಲರ ಬಳಿ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ. ಓಎಸ್ ನಂ.86/2012 ರ ದಾವೆಯಲ್ಲಿ ಜೆಡಿಆರ್ ರವರು ಸರ್ವೆ ನಂ.6/7 ರ 10 ಗುಂಟೆಗೆ ಸಂಬಂಧಿಸಿದಂತೆ ಪ್ರತಿ ಪರಿಹಾರ ಕೇಳಿದ್ದು ಅದು ಅವರ ಪರ ಡಿಕ್ರಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಓಎಸ್ ನಂ.86/2012 ರ ದಾವೆಯಲ್ಲಿ ಸದರಿ 10 ಗುಂಟೆಗೆ ಜೆಡಿಆರ್ ರವರ ಪರ ಆದ ಕೌಂಟರ್ ಕ್ಲೈಮ್ ಡಿಕ್ರಿಯ ವಿರುದ್ಧ ಅಪೀಲು ಸಲ್ಲಿಸಿದ್ದೀರಾ ಎಂದರೆ ಇಲ್ಲ. ಸರ್ವೆ ನಂ.6/6 ರ 10 ಗುಂಟೆಯಲ್ಲಿ ನಾವು ಸ್ವಾಧೀನದಲ್ಲಿದ್ದು ಅದೇ ರೀತಿ ಜೆಡಿಆರ್ ರವರು ಸರ್ವೆ ನಂ.6/7 ರ 10 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವು 8. 3/4 ಗುಂಟೆ ಮಾತ್ರ ಸ್ವಾಧೀನ ಇದ್ದು, ಉಳಿದ ಜಾಗವನ್ನು ಅವರು ಬಿಟ್ಟುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.6/7 ರ 10 ಗುಂಟೆಯಲ್ಲಿ ಜೆಡಿಆರ್ ರವರು ಸ್ವಾಧೀನದಲ್ಲಿದ್ದಾರೆ ಎಂದು ಅವರ ಪರ ಕೌಂಟರ್ ಕ್ಲೈಮ್ ಡಿಕ್ರಿಯಾಗಿದ್ದು ಹಾಗಾಗಿ 10 ಗುಂಟೆಯನ್ನು ಹೊರುತುಪಡಿಸಿ ಹೆಚ್ಚಿನ ಜಾಗದಲ್ಲಿ ಅವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ನಮ್ಮ 1 ¼ ಗುಂಟೆಯಲ್ಲಿ ಅವರೇ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಾವು ಈ ಅರ್ಜಿಯಲ್ಲಿ ಕೇಳಿದ ಹಾಗೇ 1 ¼ ಗುಂಟೆಯನ್ನು ಜೆಡಿಆರ್ ರವರು ಬಿಟ್ಟುಕೊಟ್ಟರೆ ಅವರ 10 ಗುಂಟೆ ಯಲ್ಲಿ ಕಡಿಮೆ ಬರುತ್ತದೆ ಎಂದರೆ ಸರಿಯಲ್ಲ.

ಜೆಡಿಆರ್ ರವರು ಒತ್ತುವರಿ ಮಾಡಿದ್ದಾರೆ ಎಂದು ಹೇಳಲಾದ 1 ¼ ಗುಂಟೆ ಯಾವ ದಿಕ್ಕಿಗೆ ಬರುತ್ತದೆ ಹಾಗೂ ಅದರ ಉದ್ದ ಅಗಲ ಹೇಳಲು ಆಗುತ್ತದಾ ಎಂದರೆ ಇಲ್ಲ. ಕೌಂಟರ್ ಕ್ಲೈಮ್ ಶೆಡ್ಯೂಲ್ ನಲ್ಲಿ ಜೆಡಿಆರ್ ರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಅದರಲ್ಲಿ ನಮ್ಮ 1 ¼ ಗುಂಟೆ ಸಹ ಸೇರಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 4 ರಲ್ಲಿ ಜೆಡಿಆರ್ ರವರ ವಿರುದ್ಧ ಹೊನ್ನಾಳಿ ಪೋಲೀಸ್ ಠಾಣೆಯಲ್ಲಿ ಅತಿಕ್ರಮಣದ ಬಗ್ಗೆ ದೂರು ನೀಡಿದ್ದೆ ಎಂದು ಹೇಳಿದ್ದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಎಕ್ಸಿಕ್ಯೂಷನ್ ಅರ್ಜಿಯಲ್ಲಿ ಹಾಕುವ ಪೂರ್ವದಲ್ಲಿ ವಕೀಲರ ಮೂಲಕ ಜಾಗ ಬಿಟ್ಟುಕೊಡಿ ಎಂದು ಜೆಡಿಆರ್ ರವರಿಗೆ ನೋಟೀಸ್ ನೀಡಿದ್ದೀರಾ ಎಂದರೆ ಇಲ್ಲ. ಜೆಡಿಆರ್ ರವರು ಅವರ 10 ಗುಂಟೆಯಲ್ಲಿ ಮಾತ್ರ ಸ್ವಾಧೀನದಲ್ಲಿದ್ದು ಹೆಚ್ಚಿನ ಜಾಗದಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.